ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿಯು ವೈಟ್‌ಫೀಲ್ಡ್ ಕೈಗಾರಿಕಾ ಕ್ಷೇತ್ರದಲ್ಲಿ 822 ಎಕರೆಯನ್ನು ಹಾಗೂ ಬೊಮ್ಮಸಂದ್ರ ಕೈಗಾರಿಕಾ ಕ್ಷೇತ್ರದಲ್ಲಿ 900 ಎಕರೆಯನ್ನು ಅಭಿವೃದ್ಧಿ ಪಡಿಸಿ ಕೈಗಾರಿಕಾ ನಿವೇಶನಗಳನ್ನು ವಿವಿಧ ಕೈಗಾರಿಕಾ ಉದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ. ಸದರಿ ಕೈಗಾರಿಕಾ ಪ್ರದೇಶಗಳಲ್ಲಿ 5 ಎಕರೆ ಅಥವಾ ಹೆಚ್ಚಿಗೆ ಹಂಚಿಕೆ ಮಾಡಿರುವ ವಿವರ ಹೀಗಿದೆ;

ಕ್ರಮ ಸಂಖ್ಯೆ	ಕೈಗಾರಿಕಾ ಪ್ರದೇಶ	ಉದ್ಯಮಿಗಳ ಸಂಖ್ಯೆ	ವಿಸ್ತೀರ್ಣ
1.	ವೈಟ್‌ಫೀಲ್ಡ್	18	249.66 ಎಕರೆಗಳು
2.	ಬೊಮ್ಮಸಂದ್ರ	27	219.96 ಎಕರೆಗಳು

ಆ) ಹಂಚಿಕೆಯಾದ ಜಮೀನನ್ನು ಕೈಗಾರಿಕಾ ಉದ್ಯಮಿಗಳು ಎರಡು ವರ್ಷಗಳಲ್ಲಿ ಅಭಿವೃದ್ಧಿಪಡಿಸಿ ಉತ್ಪಾದನೆಯನ್ನು ಪ್ರಾರಂಭ ಮಾಡಬೇಕಾಗಿರುತ್ತದೆ. ಹಾಗೂ ಗುತ್ತಿಗೆ ಒಡಂಬಡಿಕೆ ಪ್ರಕಾರ ಉದ್ದಿಮೆಯ ವಿಸ್ತರಣೆಗೆ ಕಾಯ್ದಿರಿಸಿದ ಜಮೀನನ್ನು ಉತ್ಪಾದನೆ ಪ್ರಾರಂಭ ಮಾಡಿದ 5 ವರ್ಷಗಳಲ್ಲಿ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ.

ಇ) ಜಮೀನನ್ನು ಸಕಾಲದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸದಿದ್ದಲ್ಲಿ ಗುತ್ತಿಗೆ ಒಡಂಬಡಿಕೆ ಪ್ರಕಾರ ಕಾನೂನಿನಂತೆ ಕ್ರಮ ಕೈಗೊಂಡು ಜಮೀನನ್ನು ಹಿಂತೆಗೆದುಕೊಳ್ಳಲಾಗುವುದು.

ಅಗತ್ಯವಿದ್ದಲ್ಲಿ, ಉದ್ಯಮಿಗಳಿಗೆ ಜಮೀನನ್ನು ಸಕಾಲದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಪ್ರಾಮಾಣಿಕ ತೊಂದರೆಗಳಿದ್ದಲ್ಲಿ ಅವರು ಸಾಧಿಸಿದ ಕಾರ್ಯವನ್ನು ಪರಿಗಣಿಸಿ ಉತ್ಪಾದನೆ ಪ್ರಾರಂಭ ಮಾಡಲು ಮಂಡಳಿಯು ಸಮಯ ವಿಸ್ತರಣೆಯನ್ನು ನೀಡಲಾಗುವುದು.

ವಿಷಯ : ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ ಪ್ರಿ ಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಬಗ್ಗೆ.

Q : 2277

ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಗ್ರಾಮದಲ್ಲಿ ಬಾಲಕರ ಪ್ರಿಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.
ಆ) ಆದಷ್ಟು ಬೇಗನೆ ಪ್ರಾರಂಭಿಸಲಾಗುವುದು.

ವಿಷಯ : ರಾಜೀವ್‌ಗಾಂಧಿ ಪ್ರತಿಮೆಯನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸುವುದು.

Q : 1626

ಶ್ರೀ ಜಿ. ಪುಟ್ಟಸ್ವಾಮಿಗೌಡ(ಹೊಳೆನರಸೀಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರಕಾರವು ರಾಜೀವ್‌ಗಾಂಧಿ ಅವರ ಪ್ರತಿಮೆಯನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಿದೆಯೇ?
ಆ) ಇಲ್ಲದಿದ್ದಲ್ಲಿ, ಬೆಂಗಳೂರು ನಗರದಲ್ಲಿ ರಾಜೀವ್‌ಗಾಂಧಿ ಅವರ ಪ್ರತಿಮೆಯನ್ನು ಸ್ಥಾಪಿಸುವ ಪ್ರಸ್ತಾಪವಿದೆಯೇ?
ಇ) ಹಾಗಿದ್ದಲ್ಲಿ, ಆ ಉದ್ದೇಶಕ್ಕಾಗಿ ಆಯ್ಕೆ ಮಾಡಿದ ಸ್ಥಳ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.
ಆ) ಇಲ್ಲ.
ಇ) ಉದ್ಭವಿಸುವುದಿಲ್ಲ.

ವಿಷಯ : ಬೆಂಗಳೂರು ಮಹಾನಗರಪಾಲಿಕೆಯ ಆಸ್ತಿ ತೆರಿಗೆ ಲೆಕ್ಕ.

Q : 1627

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರಪಾಲಿಕೆಗೆ ಪ್ರತಿವರ್ಷವು ಕಂದಾಯವನ್ನು ಪಾವತಿ ಮಾಡುವ ಸ್ವತ್ತಿನ ಮಾಲೀಕರ ಸಂಖ್ಯೆ ಎಷ್ಟು? 1992-93ನೇ ಸಾಲಿನಲ್ಲಿ ಕಂದಾಯ ವಸೂಲು ಮಾಡಿರುವ ಮೊತ್ತವೆಷ್ಟು? (ಡಿಸೆಂಬರ್ 1992 ರವರೆಗೆ)
ಆ) ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆಯ ಲೆಕ್ಕವನ್ನು ಗಣಕೀಕರಿಸಲಾಗಿದೆಯೇ?
ಇ) ಹಾಗಿದ್ದಲ್ಲಿ, ಆಸ್ತಿ ತೆರಿಗೆಯನ್ನು ಗಣಕೀಕರಿಸಲು ಮತ್ತು ಆಸ್ತಿ ತೆರಿಗೆಯ ಲೆಕ್ಕ ಮಾಡಲು ಗಣಕೀಕರಣವನ್ನು 1993-94ನೇ ಸಾಲಿನಲ್ಲಿ ಅಳವಡಿಸಲಾಗುವುದೇ?